**ಅಸಲು ದಾವಾ ಸಂಖ್ಯೆ: 879/2023**

**ಪಿಡಬ್ಲೂ -1**

**ದಿಃ 25-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ. MMH ರವರಿಂದಃ-**

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ದಿಃ 05-12-2022 ರ ಖರೀದಿ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಏಕೆಂದರೆ ಸದರಿ ಖರೀದಿ ಪತ್ರದ ಮೂಲ ದಾಖಲೆಯನ್ನು ಹಾಜರುಪಡಿಸುವಂತೆ 4ನೇ ಪ್ರತಿವಾದಿಗೆ ಈ ನ್ಯಾಯಾಲಯದಿಂದ ಆದೇಶವಿದ್ದರೂ ಸಹ 4ನೇ ಪ್ರತಿವಾದಿ ಅದನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ದಿನ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-9 ಎಂದು, ಗುರುತಿಸಲಾಯಿತು. (26 ಪುಟಗಳು)

ಹುದಲಿ ಗ್ರಾಮದ ಸರ್ವೆ ನಂಬರ 122/13 ರ ಪಹಣಿ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-10 ಎಂದು, (2 ಪುಟಗಳು) ಗುರುತಿಸಲಾಯಿತು.

**ಪ್ರತಿವಾದಿಯರು ಮತ್ತು ಅವರ ಪರ ವಕೀಲರು ಗೈರು ಹಾಜರಿಯಾಗಿದ್ದು ಸಾಕ್ಷಿಯ ಪಾಟೀ ಸವಾಲಿಗೆ ಮುಂದಿನ ದಿನಾಂಕವನ್ನು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**